# ಒಳಗುದಿ

ಮಧುರಾ ಕರ್ಣಮ್



ಗಿರಿಗಿರಿ ತಿರುಗುತ್ತಿತ್ತು ಜೈಂಟ್‌ವ್ಹೀಲು. ಕುಳಿತವರೆಲ್ಲ ‘ಹೋ…’ ಎಂದು ಕೂಗುತ್ತಿದ್ದರು. ಅದರಲ್ಲಿ ನನ್ನ ಮಕ್ಕಳು, ಮೊಮ್ಮಕ್ಕಳೂ ಸೇರಿದ್ದರು. ಚಿಕ್ಕ ಮೊಮ್ಮಗಳು ಆದ್ಯಾ ನನ್ನ ತೊಡೆಯ ಮೇಲೆ ಮಲಗಿ ನಿದ್ರಿಸುತ್ತಿದ್ದಳು. ಪತಿ ವೆಂಕಟೇಶ ಹತ್ತಿರದಲ್ಲೇ ನಿಂತು ಚಪ್ಪಾಳೆ ತಟ್ಟಿ ಅವರನ್ನು ಹುರಿದುಂಬಿಸುತ್ತಿದ್ದರು. ಅದು ಮೇಲಿನಿಂದ ಕೆಳಗೆ, ಕೆಳಗಿನಿಂದ ಮೇಲೆ ಸುತ್ತುವಾಗ ನನಗೆ ಕುವೆಂಪು ಅವರ ‘ಮೂಡುವನು… ರವಿ ಮೂಡುವನು’ ಎಂಬ ಕವಿತೆ ನೆನಪಾಗುತ್ತಿತ್ತು. ಅದರಲ್ಲಿ ಕೊನೆಗೆ ‘ಏರಿದವನು ಇಳಿಯಲೇಬೇಕೆಂಬ ತತ್ವವನು ಸಾರುವನು’ ಎಂಬ ಸಾಲಿನಂತೆ ನಿಧಾನವಾಗಿ ಕೆಳಗೆ ಇಳಿಯಲಾರಂಭಿಸಿತು. ಹೌದು, ಹರಯದಲ್ಲಿ ಹಾರಾಡುವ ನಾವು ಮುಪ್ಪಿನಲ್ಲಿ ಕೊಂಚ ಇಳಿಯಬೇಕೆಂಬ ವಿಷಯವನ್ನು ಮರೆತೇಬಿಡುತ್ತೇವೆ. ಈ ಬದುಕೇ ಹಾಗೆ. ಒಮ್ಮೆ ಮೇಲೆ… ಮತ್ತೊಮ್ಮೆ ಕೆಳಗೆ ಏರಿಸಿ ಇಳಿಸಿ ತೂಗಾಡಿಸುತ್ತ ನಮ್ಮನ್ನು ಪರೀಕ್ಷಿಸುತ್ತಲೇ ಇರುತ್ತದಲ್ಲ. ಬೀಳಿಸಬೇಡವೆಂದು ಬೇಡಿಕೊಳ್ಳುವುದಷ್ಟೇ ನಮ್ಮ ಕೈಲಿರೋದು. ನನ್ನಲ್ಲಿ ಭಾವನೆಗಳು ಏರಿಳಿಯುತ್ತಿದ್ದಂತೆ ಜೈಂಟ್ ವ್ಹೀಲ್ ನಿಂತಿತ್ತು. ಪುನೀತ ಓಡುತ್ತ ಬಂದು ‘ಅಜ್ಜೀ, ನೀನೂ ಬರಬೇಕಾಗಿತ್ತು. ಎಷ್ಟು ಮಜಾ ಬಂತು ಗೊತ್ತದ?’ ಎಂದ. ಹಿಂದೆ ಎಲ್ಲರೂ ಬಂದಾಗ ಇವರು ‘ನಾನೂ ಕೂಡತಿದ್ದೆ’ ಎಂದರು. ಅನಂತ ‘ಬ್ಯಾಡಪಾ, ನಿನಗ ಹೈ ಬಿ.ಪಿ. ಅದ. ತ್ರಾಸಾಗಬಹುದು’ ಎಂದ. ವೆಂಕಟೇಶ ‘ಆಂ’ ಎಂದು ಕಿವಿ ಮುಂದೆ ಮಾಡಿದರು. ಅರೆ ಕಿವುಡೊಂದು ಸೇರಿಕೊಂಡು ಬಲು ಕಷ್ಟವಾಗಿತ್ತು. ಅನಂತ ಸನ್ನೆಯಿಂದಲೇ ಬೇಡವೆಂದ. ಸಂತೋಷ ‘ಪಿಕ್ಚರ್ ನೋಡೀರೆಂತ, ಟ್ರೇನ್‌ನ್ಯಾಗ ಕೂತಿರೆಂತ’ ಎನ್ನುತ್ತ ಸನ್ನೆಯ ಮೂಲಕವೂ ತೋರಿಸಿದ. ತಕ್ಷಣ ಪುನೀತ ಕಣ್ಣುಗಳ ಮುಂದೆ ಎರಡೂ ಬೆರಳುಗಳನ್ನು ದುಂಡಗೆ ಮಾಡಿ ‘ಪಿಕ್ಚರ್… ಸಿನಿಮಾ’ ಎಂದು ಕೂಗಿದ. ಅವರು ಕೊಂಚ ಅಸಮಾಧಾನದಿಂದಲೇ ‘ಬಾ ಅಂತ ನಮ್ಮನ್ನ ಕರಕೊಂಡು ಬರ್ತಾರ. ಎಲ್ಲಾ ತಾವ ಆಡತಾರ. ನಾವು ನೋಡಕೋತ ಕೂಡಬುಕು’ ಎಂದು ಬುಸುಗುಟ್ಟಿದರು.

ಕೇಳಿಸದವರಂತೆ ಅನಂತ ‘ಎಲ್ಲಾರೂ ಸ್ವಿಮಿಂಗ್ ಪೂಲ್ ಕಡೆ ಹೋಗಿ ನೀರಾಟಾ ಆಡೋಣ ರ್ರಿ. ನಿಮ್ಮ ಅರವಿ ಇರೊ ಚೀಲಾ ತೊಗೊರಿ. ಅಲ್ಲೇ ಬದಲಾಯ್ಸಿಗೊಂಡೀರಂತ’ ಎಂದ. ‘ನಾನೂ ಬರ್ತೇನಿ’ ಎನ್ನುತ್ತ ಇವರು ಎಲ್ಲರಿಗಿಂತ ಮೊದಲೇ ತಮ್ಮ ಚೀಲ ಹಿಡಿದು ಹೊರಟರು. ಮಲಗಿದ್ದ ಮಗುವನ್ನು ನೋಡಿ ಸೊಸೆ ‘ಅವ್ವಾ, ನಾ ಅಕಿನ್ನ ಮಲಗಿಸಿಗೋತೇನಿ. ಕೊಡ್ರಿ’ ಎಂದು ಮುಂದೆ ಬಂದಳು. ‘ಬ್ಯಾಡವಾ, ನಾನ ಅಕಿನ್ನ ಕರಕೊಂಡು ಕೂತಿರ್ತೇನಿ. ನೀವೆಲ್ಲಾ ಆಡಿ ರ್ರಿ. ನನಗ ಥಂಡಿ ತಡಿಯೂದಿಲ್ಲಾ. ಮೊನ್ನೆರೆ ಜ್ವರಾ ಕಡಿಮ್ಯಾಗ್ಯಾವ’ ಎಂದೆ. ಸಂತು ಕೂಡ ‘ಹೌದು ಅವ್ವಾ, ನೀ ಇಲ್ಲೇ ಕೂತಿರು’ ಎಂದು ಮುನ್ನಡೆದ. ಅನುಮಾನಿಸುತ್ತಲೇ ನಿಂತಿದ್ದ ಸೊಸೆಯನ್ನು ‘ನೀ ಹೋಗಿ ಬಾ’ ಎಂದು ಕಳಿಸಿದೆ. ಸಂತು ‘ನೆರಳಾಗ ಕೂಡು ಬಾ ಅವ್ವಾ’ ಎಂದು ನೆರಳಿನಲ್ಲಿ ಬೆಂಚಿನ ಮೇಲೆ ನನ್ನನ್ನು ಕೂರಿಸಿ ಪಕ್ಕದಲ್ಲೇ ಮಗುವನ್ನು ಮಲಗಿಸಿ ಹೋದ. ಪುನೀತ ಓಡಿ ಬಂದವನೇ ‘ನನ್ನ ಪುಸ್ತಕ ಇಟಗೊ ಅಜ್ಜಿ. ನೀರಾಗ ಒದ್ದಿ ಆಗ್ತದ’ ಎನ್ನುತ್ತ ನೋಟ್‌ಬುಕ್ಕು, ಪೆನ್ಸಿಲ್ ಪಕ್ಕದಲ್ಲಿಟ್ಟು ಹೋದ. ನಸುನಗು ಮೂಡಿತು. ಹುಚ್ಚು ಹುಡುಗ, ಯಾವಾಗಲೂ ಕೈಯಲ್ಲಿ ನೋಟ್‌ಬುಕ್ಕು, ಪೆನ್ಸಿಲ್ಲು ಇರಲೇಬೇಕು.